ಕತೆ

ಬನವಾಸಿ ವೆಂಕಟೇಶ ದೀಕ್ಷಿತ್



# ಸರಪಳಿ

ಜೆ.ಪಿ. ನಗರದ ಇಪ್ಪತ್ನಾಲ್ಕನೇ ಮುಖ್ಯರಸ್ತೆಯ ಖದರು ಸಮನಾಂತರವಾಗಿ ಬಿದ್ದುಕೊಂಡ ಒಳರಸ್ತೆಗಳಿಗಿಲ್ಲ. ಪೋಸ್ಟಾಫೀಸು ಪಕ್ಕದಲ್ಲಿ ಎಡಕ್ಕೆ ಹೊರಳಿ ಸೊಟ್ಟಪಟ್ಟ ಉದ್ದಕೆ ಸಾಗುವ ಇಕ್ಕಟ್ಟು ರಸ್ತೆಯುದ್ದಕ್ಕೂ ಎರಡೂಕಡೆ ಇದ್ದಷ್ಟೆ ಜಾಗದಲ್ಲಿ ಕಾರು ಮೋಟಾರುಬೈಕುಗಳನ್ನು ಜಾಣ್ಮೆಯಿಂದ ನಿಲ್ಲಿಸಿರುತ್ತಾರೆ. ಹಗಲಿಡೀ ತರಕಾರಿ, ಹಣ್ಣು, ಬಾಚಣಿಕೆ ಬಲೂನು, ಅಗ್ಗದ ಪ್ಲಾಸ್ಟಿಕ್ ಸಾಮಾನುಗಳನ್ನು ಮಾರಿದ ತರಹೆವಾರು ಚಿಲ್ಲರೆ ವ್ಯಾಪಾರಿಗಳು ರಾತ್ರಿ ಸೈಕಲ್ ಗಾಲಿಯ ತಳ್ಳುಗಾಡಿಗಳನ್ನು ವಾಹನಗಳ ಮಧ್ಯೆ ಪಡಕಿನಲ್ಲಿ, ಮುಚ್ಚಿದ ಅಂಗಡಿಗಳ ಬಾಗಿಲಿನಲ್ಲಿ